# ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೋಂದಾಯಿತ ಕಛೇರಿ: ಲೋಕೋಪಯೋಗಿ ಕಛೇರಿ ಪೂರಕ ಕಟ್ಟಡ, 3ನೇ ಮಹಡಿ, ಕೆ. ಆರ್. ಸರ್ಕಲ್, ಬೆಂಗಳೂರು – 560001
ದೂರವಾಣಿ: 22244484 22277488, 22277393. ಟೆಲಿಫ್ಯಾಕ್ಸ್: 080–22219470

## 30.09.2009 ರಲ್ಲಿದ್ದಂತೆ ಕೃಷ್ಣಾ ಮೇಲ್ದಂಡೆ ಯೋಜನೆಯ ಪ್ರಗತಿಯ ವರದಿ

(ಷೇರು ವಿನಿಮಯ ಕೇಂದ್ರದೊಂದಿಗೆ ಮಾಡಿಕೊಂಡ ಪಟ್ಟಿ ಒಪ್ಪಂದದ ಅನುಸಾರ)

| **ಘಟಕಗಳು / ಯೋಜಿತ** | **30.09.2009 ರಲ್ಲಿದ್ದಂತೆ ಪ್ರಗತಿ** |
|---|---|
| ಎ) ನಾರಾಯಣಪುರ ಅಣೆಕಟ್ಟು ಮತ್ತು ಸಂಬಂಧಿತ ಕೆಲಸಗಳು – **ಪೂರ್ಣಗೊಂಡಿದೆ** | ಪೂರ್ಣಗೊಂಡಿದೆ |
| ಬಿ) ಆಲಮಟ್ಟಿ ಅಣೆಕಟ್ಟು ಮತ್ತು ಸಂಬಂಧಿತ ಕೆಲಸಗಳು<br>ಅ) ಎಡದಂಡೆ ಮಣ್ಣು ಮತ್ತು ಮೇಸನ್ರಿ ಡ್ಯಾಂ – **ಇಎಲ್ 528.800 ಮೀ.**<br>ಆ) ಸ್ಪಿಲ್‌ವೇ – **ಇಎಲ್ 509.016 ಮೀ.**<br>ಇ) ಬಲದಂಡೆ ಮೇಸನ್ರಿ ಡ್ಯಾಂ ಪವರ್ ಡ್ಯಾಂ – **ಇಎಲ್ 528.760 ಮೀ.**<br>ಪ್ರವಾಹರಹಿತ ವಿಭಾಗ–**ಇಎಲ್ 528.760 ಮೀ.**<br>ಈ) ಗೇಟ್‌ಗಳ ನಿರ್ಮಾಣ – **26 ಸಂಖ್ಯೆಗಳು** | ಪೂರ್ಣಗೊಂಡಿದೆ<br>ಗೇಟ್‌ಗಳೂ ಸೇರಿದಂತೆ ಅಣೆಕಟ್ಟಿಗೆ ಸಂಬಂಧಿಸಿದ ಕೆಲಸಗಳು ಪೂರ್ಣಗೊಂಡಿವೆ. ನೀರನ್ನು ಎಫ್‌ಆರ್.ಎಲ್.519.60 ಮೀ. ವರೆಗೆ ಶೇಖರಿಸಲಾಗಿದೆ ಹಾಗೂ ಬಳಸಲಾಗುತ್ತಿದೆ. |
| ಸಿ) ನಾರಾಯಣಪುರ ಎಡದಂಡೆ ಕಾಲುವೆ<br>ಅ) ಮುಖ್ಯ ಕಾಲುವೆ ಉದ್ದ – **ಕಿ.ಮೀ. 78**<br>ನೀರಾವರಿ ಪ್ರದೇಶ – **47,233 ಹೆಕ್ಟೇರ್** | ಪೂರ್ಣಗೊಂಡಿದೆ. ಈ ಕಾಲುವೆ ಗುಲಬರ್ಗಾ ಜಿಲ್ಲೆಯ ಸುರಪೂರ ತಾಲೂಕಿಗೆ ನೀರಾವರಿ ಒದಗಿಸುತ್ತಿದೆ.<br>53,590 ಹೆಕ್ಟೇರ್ |
| ಆ) ಶಹಾಪುರ ಶಾಖಾ ಕಾಲುವೆ<br>ಮುಖ್ಯ ಕಾಲುವೆ – ಉದ್ದ–**ಕಿ.ಮೀ.76**<br>ನೀರಾವರಿ ಪ್ರದೇಶ – **1,22,120 ಹೆಕ್ಟೇರ್** | ಪೂರ್ಣಗೊಂಡಿದೆ ಈ ಕಾಲುವೆ ಗುಲಬರ್ಗಾ ಜಿಲ್ಲೆಯ ಸುರಪೂರ ಮತ್ತು ಶಹಾಪೂರ ತಾಲೂಕುಗಳಿಗೆ ನೀರಾವರಿ ಒದಗಿಸುತ್ತಿದೆ.<br>1,11,005 ಹೆಕ್ಟೇರ್ |
| ಇ) ಮುದ್‌ಬಾಳ್ ಶಾಖಾ ಕಾಲುವೆ<br>ಮುಖ್ಯ ಕಾಲುವೆ – ಉದ್ದ – ಕಿ.ಮೀ.50.80<br>ನೀರಾವರಿ ಪ್ರದೇಶ – **51,000 ಹೆಕ್ಟೇರ್** | ಪೂರ್ಣಗೊಂಡಿದೆ. ಈ ಕಾಲುವೆ ಗುಲಬರ್ಗಾ ಜಿಲ್ಲೆಯ ಶಹಾಪೂರ ಮತ್ತು ಜೇವರ್ಗಿ ತಾಲೂಕುಗಳಿಗೆ ನೀರಾವರಿ ಒದಗಿಸುತ್ತಿದೆ.<br>45,015 ಹೆಕ್ಟೇರ್ |
| ಈ) ಇಂಡಿ ಶಾಖಾ ಕಾಲುವೆ<br>ಮುಖ್ಯ ಕಾಲುವೆ – ಉದ್ದ – **ಕಿ.ಮೀ. 175**<br>ನೀರಾವರಿ ಪ್ರದೇಶ – **1,31,260 ಹೆಕ್ಟೇರ್** | ಕೆಲಸಗಳು ಪೂರ್ಣಗೊಂಡಿವೆ. ಈ ಕಾಲುವೆ ಗುಲಬರ್ಗಾ ಜಿಲ್ಲೆಯ ಸುರಪೂರ ಮತ್ತು ಜೇವರ್ಗಿ ತಾಲೂಕುಗಳು ಮತ್ತು ಬಿಜಾಪೂರ ಜಿಲ್ಲೆಯ ಸಿಂದಗಿ ಮತ್ತು ಇಂಡಿ ತಾಲೂಕುಗಳಿಗೆ ನೀರಾವರಿ ಒದಗಿಸುತ್ತಿದೆ.<br>1,31,295 ಹೆಕ್ಟೇರ್ |
| ಉ) ಜೇವರ್ಗಿ ಶಾಖಾ ಕಾಲುವೆ<br>ಮುಖ್ಯ ಕಾಲುವೆ – ಉದ್ದ – **ಕಿ.ಮೀ.86.36**<br>ನೀರಾವರಿ ಪ್ರದೇಶ – **57,100 ಹೆಕ್ಟೇರ್** | ಈ ಕಾಲುವೆಯ ನೀರಾವರಿ ಯೋಜನೆಯು ಗುಲಬರ್ಗಾ ಜಿಲ್ಲೆಯ ಶಹಾಪೂರ ಮತ್ತು ಜೇವರ್ಗಿ ತಾಲೂಕುಗಳನ್ನು ಒಳಗೊಂಡಿದೆ. ಒಟ್ಟು 168 ಸಿಡಿ ಕೆಲಸಗಳು ಸೇರಿದಂತೆ ಮುಖ್ಯ ಕಾಲುವೆಯ 86.36 ನೇ ಕಿ.ಮೀ.ವರೆಗೆ ಕೆಲಸವು ಪೂರ್ಣಗೊಂಡಿದೆ. ಹಂಚಿಕೆ ಕಾಲುವೆ 1 ರಿಂದ 18ರವರೆಗೆ ಪೂರ್ಣಗೊಂಡಿದೆ. ಎಲ್ಲ ಹಂಚಿಕೆ ಕಾಲುವೆಗಳಲ್ಲಿ ನೀರನ್ನು ಹರಿಸಲಾಗಿದೆ.<br>58,121 ಹೆಕ್ಟೇರ್ |

| | |
|---|---|
| ಡಿ) ನಾರಾಯಣಪುರ ಬಲದಂಡೆ ಕಾಲುವೆ<br>ಮುಖ್ಯ ಕಾಲುವೆ – ಉದ್ದ – **ಕಿ.ಮೀ.95.00**<br><br>ನೀರಾವರಿ ಪ್ರದೇಶ – **84,000 ಹೆಕ್ಟೇರ್** | ನಾರಾಯಣಪುರ ಬಲದಂಡೆ ಕಾಲುವೆ ನೀರಾವರಿ ಯೋಜನೆಯು ರಾಯಚೂರು ಜಿಲ್ಲೆಯ ಲಿಂಗಸೂರು ಮತ್ತು ದೇವದುರ್ಗ ತಾಲ್ಲೋಕುಗಳನ್ನು ಒಳಗೊಂಡಿದೆ. ಒಟ್ಟು 95 ಕಿ.ಮೀ. ಉದ್ದದ 195 ಸಿ.ಡಿ. ಕಾಮಗಾರಿಗಳನ್ನು ಒಳಗೊಂಡಿರುವ ಈ ಮುಖ್ಯ ಕಾಲುವೆಯನ್ನು ಪೂರ್ಣಗೊಳಿಸಲಾಗಿದೆ. 1 ರಿಂದ 18ರ ವರೆಗಿನ ಎಲ್ಲಾ ಹಂಚಿಕೆ ಕಾಲುವೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಉಳಿದ ವಿತರಣಾ ಕಾಲುವೆ ಸಂಖ್ಯೆ 15, 16 ಮತ್ತು 18ರ ಶೀಳುಗಾಲುವೆಗಳ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿರುತ್ತದೆ. ಮುಖ್ಯ ಕಾಲುವೆ ಮತ್ತು ವಿತರಣಾ ಕಾಲುವೆ ಸಂಖ್ಯೆ 1 ರಿಂದ 18ರ ರ ವರೆಗೆ ನೀರನ್ನು ಹರಿಸಲಾಗಿದೆ.<br><br>84,000 ಹೆಕ್ಟೇರ್ |
| ಇ) ಆಲಮಟ್ಟಿ ಎಡದಂಡೆ ಕಾಲುವೆ<br>ಮುಖ್ಯ ಕಾಲುವೆ – ಉದ್ದ – **ಕಿ.ಮೀ.93.115**<br><br>ನೀರಾವರಿ ಪ್ರದೇಶ – **20,235 ಹೆಕ್ಟೇರ್** | ಆಲಮಟ್ಟಿ ಎಡದಂಡೆ ಕಾಲುವೆ ಏತ ನೀರಾವರಿ ಯೋಜನೆಯಡಿ ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ಮತ್ತು ಬಸವನ ಬಾಗೇವಾಡಿ ತಾಲೂಕುಗಳನ್ನು ಒಳಗೊಂಡಿದೆ. ಮುಖ್ಯ ಸ್ಥಾವರ ಕಾಮಗಾರಿ ಪೂರ್ಣಗೊಂಡಿದ್ದು, ಮುಖ್ಯ ಕಾಲುವೆ ಕಿ.ಮೀ 0.00 ರಿಂದ ಕಿ.ಮೀ 67.00ವರೆಗೆ ಪೂರ್ಣಗೊಳಿಸಲಾಗಿದೆ. ಕಿ.ಮೀ. 68 ರಿಂದ 85 ವರೆಗೆ ಕಿ.ಮೀ 72.00 ಹೊರತುಪಡಿಸಿ ಎಲ್ಲಾ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿವೆ. 43 ಹಂಚು ಕಾಲುವೆಗಳಲ್ಲಿ 1 ರಿಂದ 28 ಪೂರ್ಣಗೊಂಡಿದೆ ಮತ್ತು 29 ರಿಂದ 40 ಹಂಚಿಕೆ ಕಾಲುವೆಗಳಲ್ಲಿ ಹಂಚಿಕೆ ಕಾಲುವೆ 29 ಹೊರತುಪಡಿಸಿ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿವೆ.<br><br>21,998 ಹೆಕ್ಟೇರ್ |
| ಎಫ್) ಆಲಮಟ್ಟಿ ಬಲದಂಡೆ ಕಾಲುವೆ<br>ಮುಖ್ಯ ಕಾಲುವೆ – ಉದ್ದ – **ಕಿ.ಮೀ.67.50**<br><br>ನೀರಾವರಿ ಪ್ರದೇಶ – **9,900 ಹೆಕ್ಟೇರ್** | ಆಲಮಟ್ಟಿ ಬಲದಂಡೆ ಕಾಲುವೆ ಏತ ನೀರಾವರಿ ಯೋಜನೆಯು ಬಾಗಲಕೋಟ ಜಿಲ್ಲೆಯ ಹುನಗುಂದ ಮತ್ತು ಬಾಗಲಕೋಟ ತಾಲೂಕುಗಳಿಗೆ ನೀರಾವರಿ ಒದಗಿಸಲಾಗುತ್ತಿದೆ. ಮುಖ್ಯ ಸ್ಥಾವರ ಮತ್ತು ಜಾಕ್‌ವೆಲ್‌ಗಳ ಕೆಲಸ ಪೂರ್ಣಗೊಂಡಿದೆ. ಮುಖ್ಯ ಕಾಲುವೆ ಕಿ.ಮೀ.0.00 ಯಿಂದ 67 ರವರೆಗೆ ಪೂರ್ಣಗೊಂಡಿದೆ. ವಿತರಣಾ ಕಾಲುವೆ 1 ರಿಂದ 24 ರವರೆಗೆ ಪೂರ್ಣಗೊಂಡಿದೆ.. ಮುಖ್ಯ ಕಾಲುವೆ ಮತ್ತು ವಿತರಣಾ ಕಾಲುವೆ 1 ರಿಂದ 24 ರವರೆಗೆ ನೀರನ್ನು ಹರಿಸಲಾಗಿದೆ.<br><br>9,137 ಹೆಕ್ಟೇರ್. |
| ಜಿ) ಮುಳ್‌ವಾಡ್ ಏತ ನೀರಾವರಿ ಯೋಜನೆ<br>ಮುಖ್ಯ ಕಾಲುವೆ – ಉದ್ದ – **ಕಿ.ಮೀ.107.40**<br><br>ನೀರಾವರಿ ಪ್ರದೇಶ – **30,850 ಹೆಕ್ಟೇರ್** | ಮುಳವಾಡ ಏತ ನೀರಾವರಿ ಯೋಜನೆಯು ಬಿಜಾಪೂರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕು ಮತ್ತು ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕುಗಳನ್ನು ಒಳಗೊಂಡಿದೆ.. ಏತ ನೀರಾವರಿಯ ಮುಖ್ಯ ಸ್ಥಾವರವನ್ನು ಮತ್ತು ಲೀಡ್ ಆಫ್ ಕಾಲುವೆಯನ್ನು ಪೂರ್ಣಗೊಳಿಸಲಾಗಿದೆ. ಪೂರ್ವ ಕಾಲುವೆಯ 17.40 ಕಿ.ಮೀ. ವರೆಗೆ ಕೆಲಸ ಪೂರ್ಣಗೊಳಿಸಲಾಗಿದೆ. 6 ವಿತರಣಾ ಕಾಲುವೆಗಳಲ್ಲಿ 1 ರಿಂದ 5 ವಿತರಣಾ ಕಾಲುವೆಗಳನ್ನು ಪೂರ್ಣಗೊಳಿಸಲಾಗಿದ್ದು, 6ನೇ ವಿತರಣಾ ಕಾಲುವೆ ಕಾಮಗಾರಿ ಮುಕ್ತಾಯದ ಹಂತದಲ್ಲಿವೆ.<br><br>ಪಶ್ಚಿಮ ಕಾಲುವೆ ಕಿ.ಮೀ.0.00 ಯಿಂದ ಕಿ.ಮೀ.78.00 ರವರೆಗೆ ಪೂರ್ಣಗೊಂಡಿದೆ. ವಿತರಣಾ ಕಾಲುವೆಗಳು 1 ರಿಂದ 43 ಪೂರ್ಣಗೊಂಡಿದೆ. ಪೂರ್ವ ಕಾಲುವೆ, ಪಶ್ಚಿಮ ಕಾಲುವೆ ಮತ್ತು ಹಂಚಿಕೆ ಕಾಲುವೆಗಳಲ್ಲಿ ನೀರನ್ನು ಹರಿಸಲಾಗಿದೆ.<br><br>21,497 ಹೆಕ್ಟೇರ್ |

| | |
|---|---|
| ಹೆಚ್) ರಾಂಪುರ ಏತ ನೀರಾವರಿ ಯೋಜನೆ<br>ಮುಖ್ಯ ಕಾಲುವೆ – ಉದ್ದ – **ಕಿ.ಮೀ.37.50**<br><br>ನೀರಾವರಿ ಪ್ರದೇಶ – **20,235 ಹೆಕ್ಟೇರ್** | ರಾಂಪೂರ ಏತ ನೀರಾವರಿ ಯೋಜನೆಯು ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿಗೆ ನೀರಾವರಿ ಕಲ್ಪಿಸಿದೆ. ಯೋಜನೆಯ ನವಲಿಯಲ್ಲಿನ ಮೊದಲನೇ ಮುಖ್ಯ ಸ್ಥಾವರ ಪೂರ್ಣಗೊಂಡಿದೆ ಮತ್ತು ಆನಹೊಸುರ್ ಎರಡನೆಯ ಮುಖ್ಯ ಸ್ಥಾವರ ಪೂರ್ಣ ಗೊಂಡಿದ್ದು. ಲೀಡ್ ಆಫ್ ಚಾನಲ್‌ನ ಎಲ್ಲಾ 14.00 ಕಿ.ಮೀ. ಉದ್ದದ ಕಾಮಗಾರಿ ಪೂರ್ಣಗೊಂಡಿದೆ. ಪೂರ್ವ ಶಾಖಾ ಕಾಲುವೆಯ ಕಿ.ಮೀ.0.00 ಯಿಂದ 20.00ರ ನಿರ್ಮಾಣ ಕಾರ್ಯವು ಮತ್ತು ಪಶ್ಚಿಮ ವಿತರಣಾ ಕಾಲುವೆಯ ಕಿ.ಮೀ. 0.00 ಯಿಂದ ಕಿ.ಮೀ 26.14 ರವರೆಗೆ ಪೂರ್ಣಗೊಂಡಿದೆ. ಲ್ಯಾಟರಲ್‌ಗಳು ಮತ್ತು ಎಫ್ಐಸಿಗಳು ಸೇರಿದಂತೆ ಲೀಡ್ ಆಫ್ ಚಾನಲ್‌ನ ಡಿಸ್ಟ್ರಿಬ್ಯೂಟರಿಗಳು ಮುಕ್ತಾಯಗೊಂಡಿದೆ.. ನೀರಾವರಿಗಾಗಿ ಲೀಡ್ ಆಫ್ ಚಾನಲ್‌ನಲ್ಲಿ ನೀರನ್ನು ಹರಿಸಲಾಗಿದೆ.<br><br>19,406 ಹೆಕ್ಟೇರ್ |
| ಐ) ಇಂಡಿ ಏತ ನೀರಾವರಿ ಯೋಜನೆ<br>ಉದ್ದ – **ಕಿ.ಮೀ. 97.30**<br><br>ನೀರಾವರಿ ಪ್ರದೇಶ – **41,900 ಹೆಕ್ಟೇರ್** | ಇಂಡಿ ಏತ ನೀರಾವರಿ ಯೋಜನೆಯು ಗುಲಬರ್ಗಾ ಜಿಲ್ಲೆಯ ಸುರಪೂರ ಮತ್ತು ಜೇವರ್ಗಿ ತಾಲೂಕುಗಳು ಮತ್ತು ಬಿಜಾಪೂರ ಜಿಲ್ಲೆಯ ಸಿಂದಗಿ ಮತ್ತು ಇಂಡಿ ತಾಲೂಕುಗಳಿಗೆ ನೀರಾವರಿ ಒದಗಿಸಲಾಗುತ್ತಿದೆ. ಯೋಜನೆಯ ಮುಖ್ಯ ಸ್ಥಾವರಗಳು ಮತ್ತು ಪಂಪಿಂಗ್ ಮೆಷಿನರಿ ಪೂರ್ಣ ಗೊಂಡಿದೆ. ಇಡಿ ಮುಖ್ಯ ಕಾಲುವೆಯ ಕಿ.ಮೀ.0.00 ರಿಂದ 97.30 ರವರೆಗಿನ ಕಾಮಗಾರಿ ಪೂರ್ಣಗೊಂಡಿದೆ ಸಂಬಂಧಪಟ್ಟ ಕಾಲುವೆ ಜಾಲಗಳು ಪೂರ್ಣ ಗೊಂಡಿದ್ದು, ವಿತರಣಾ ಕಾಲುವೆ ಸಂಖ್ಯೆ 1 ರಿಂದ 40 ರವರೆಗೆ, ವಿತರಣಾ ಕಾಲುವೆ ಸಂಖ್ಯೆ 22 ಹೊರತುಪಡಿಸಿ, ಕಾಮಗಾರಿ ಪೂರ್ಣ ಗೊಂಡಿದೆ. ವಿತರಣಾ ಕಾಲುವೆ ಸಂಖ್ಯೆ 22ರ ಕಾಮಗಾರಿ ಪ್ರಗತಿಯಲ್ಲಿದೆ. ಪೂರ್ಣಗೊಂಡ ವಿತರಣಾ ಕಾಲುವೆಗಳಲ್ಲಿ ನೀರನ್ನು ಹರಿಸಲಾಗಿದೆ<br><br>41,813 ಹೆಕ್ಟೇರ್ |
| **2.ಕೃಷ್ಣಾ ಜಲಾನಯನದಲ್ಲಿ ಇತರೆ ಯೋಜನೆಗಳು** | |
| ಎ) ರಾಮತಾಲ್ (ಮಾರೋಲ್) ಏತ ನೀರಾವರಿ ಯೋಜನೆ | ಈ ಯೋಜನೆಯಡಿ 5.84 ಟಿಎಂಸಿ ನೀರನ್ನು ಬಳಸಿಕೊಂಡು ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ 26.200 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗುವುದು. ಈ ಯೋಜನೆಯ ಮೊದಲನೇ ಜಾಕ್‌ವೆಲ್‌ನ್ನು ನಾರಾಯಣಪೂರ ಜಲಾಶಯದ ಹಿನ್ನೀರಿನಲ್ಲಿ ಮರೋಳ ಗ್ರಾಮದ ಹತ್ತಿರ ಸ್ಥಾಪಿಸಲಾಗುವುದು. ಮೊದಲನೇ ಮುಖ್ಯ ಸ್ಥಾವರಕ್ಕಾಗಿ ಇನ್‌ಟೇಕ್ ಕಾಲುವೆ, ಜಾಕ್ವೆಲ್, ಪಂಪಿಂಗ್ ಮೆಷನರಿ, ರೈಸಿಂಗ್ ಮೇನ್, ಡಿಲಿವರಿ ಚೇಂಬರ್ ಇತ್ಯಾದಿ ಕೆಲಸಗಳನ್ನು ಟರ್ನ್‌ಕೀ ಆಧಾರದ ಮೇಲೆ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದೆ. ಮೊದಲ ಹಂತದ ಕಿ.ಮೀ.0 ರಿಂದ ಕಿ.ಮೀ.8 ಪಶ್ಚಿಮ ಮುಖ್ಯ ಕಾಲುವೆ ಕಾಮಗಾರಿ ಪ್ರಗತಿಯಲ್ಲಿದೆ. ಮೊದಲ ಹಂತದ ಕಿ.ಮೀ.8.00 ರಿಂದ ಕಿ.ಮೀ.21.00 ಪಶ್ಚಿಮ ಮುಖ್ಯ ಕಾಲುವೆ ಕೆಲಸ ಮತ್ತು ವಿತರಣಾ ಕಾಲುವೆ ಸಂಖ್ಯೆ 1 ರಿಂದ 6 ವರೆಗಿನ (ವಿತರಣಾ ಕಾಲುವೆ ಸಂಖ್ಯೆ 4 ಹೊರತುಪಡಿಸಿ) ಕಾಮಗಾರಿಗಳಿಗಾಗಿ 3 ಪ್ಯಾಕೇಜೆಗಳಲ್ಲಿ ಟೆಂಡರ್‌ಗಳನ್ನು ಸ್ವೀಕರಿಸಲಾಗಿದೆ. 2ನೇ ಮುಖ್ಯ ಸ್ಥಾವರದ ಕೆಲಸಗಳು, ಜಾಕ್‌ವೆಲ್ ರೇಚಕ ಯಂತ್ರ, ರೈಸಿಂಗ್ ಮೇನ್ ಮುಂತಾದವುಗಳನ್ನೊಳಗೊಂಡ ಟರ್ನ್ ಕೀ ಕಾಮಗಾರಿಗಳು ಪ್ರಗತಿಯಲ್ಲಿವೆ. 110 ಕಿ.ವ್ಯಾ. ಟ್ರಾನ್ಸ್‌ಮಿಷನ್ ಲೈನ್ ಕಾಮಗಾರಿ ಪೂರ್ಣಗೊಂಡಿದೆ. |

| | |
|---|---|
| ಬಿ) ತೆಗ್ಗಿ – ಸಿದ್ದಾಪುರ ಏತ ನೀರಾವರಿ ಯೋಜನೆ | ಈ ಯೋಜನೆಯಿಂದ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ದೊರೆಯುವ 1.20 ಟಿಎಂಸಿ (0.90 ಟಿಎಂಸಿ 'ಎ' ಯೋಜನೆಯಡಿ) ನೀರಿನ ಉಪಯುಕ್ತ ಬಳಕೆಯಿಂದಾಗಿ ಬಾಗಲಕೋಟೆ ಜಿಲ್ಲೆ ಬೀಳಗಿ ತಾಲ್ಲೂಕಿನ 3,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗುವುದು. ವಿದ್ಯುತ್‌ಯಂತ್ರಗಳ ಕೆಲಸಗಳಿಗಾಗಿ ಮತ್ತು ಬಾಕಿ ಉಳಿದ ಜಾಕ್‌ವೆಲ್ಲಿನ ನಿರ್ಮಾಣ ಕೆಲಸಗಳಿಗಾಗಿ ಟರ್ನ್ ಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮುಖ್ಯ ಕಾಲುವೆ ಕಾಮಗಾರಿಯನ್ನು ಕಿ.ಮೀ.0.00 ರಿಂದ 12.00 ವರೆಗೆ 2 ಪ್ಯಾಕೇಜಿಗಳಲ್ಲಿ ನೀಡಲಾಗಿದೆ. ಕೃಭಾಜ.ನಿ.ನಿ. ಮಂಡಳಿಯಿಂದ ಒಪ್ಪಿಗೆಯನ್ನು ಪಡೆದ ನಂತರ ಕಾಮಗಾರಿಯ ಕೆಲಸಗಳುನ್ನು ಕೈಗೆತ್ತಿಕೊಳ್ಳಲಾಗುವುದು. |
| ಸಿ) ತಿಮ್ಮಾಪುರ ಏತ ನೀರಾವರಿ ಯೋಜನೆ (ಎಆರ್‌ಬಿಸಿ – ಹಂತ 2) | ಈ ಉದ್ದೇಶಿತ ಯೋಜನೆಯು ಆಲಮಟ್ಟಿ ಬಲದಂಡೆ ಕಾಲುವೆ ಕಿ.ಮೀ.4.92 ರಿಂದ ಆರಂಭಗೊಳ್ಳಲಿದೆ. ಈ ಯೋಜನೆಯಿಂದ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ 20,100 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸುವ ದೃಷ್ಟಿಕೋನ ಹೊಂದಿದೆ.. ಇನ್‌ಟೇಕ್ ಕಾಲುವೆ, ಜಾಕ್ವೆಲ್, ಪಂಪಿಂಗ್ ಮೆಷನರಿ, ರೈಸಿಂಗ್ ಮೇನ್, ಡಿಲಿವರಿ ಚೇಂಬರ್ ಮುಂತಾದ ಕಾಮಗಾರಿ ಕೆಲಸಗಳ ನಿರ್ಮಾಣವನ್ನು ಟರ್ನ್‌ಕೀ ಆಧಾರದ ಮೇಲೆ ನೀಡಲಾಗಿದ್ದು ಪ್ರಗತಿಯಲ್ಲಿದೆ. |
| ಡಿ) ಸೊಣ್ಣ ಏತ ನೀರಾವರಿ ಯೋಜನೆ | ಈ ಯೋಜನೆಗಳಿಂದ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ದೊರೆಯುವ 0.233 ಟಿಎಂಸಿ ಸಂಪೂರ್ಣ ನೀರಿನ ಉಪಯುಕ್ತ ಬಳಕೆಯಿಂದಾಗಿ ಬೀಳಗಿ ತಾಲ್ಲೂಕಿನ 1,055 ಹೆಕ್ಟೇರುಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗುವುದು. ಈ ಯೋಜನೆಯ ಮುಖ್ಯ ಸ್ಥಾವರ ರೇಚಕಯಂತ್ರ, ಮುಂತಾದ ಕೆಲಸಗಳನ್ನು ಟರ್ನ್ ಕೀ ಆಧಾರದ ಮೇಲೆ ವಹಿಸಿಕೊಡಲಾಗಿದ್ದು, ಕೆಲಸಗಳು ಮುಕ್ತಾಯದ ಹಂತದಲ್ಲಿವೆ. ಇಡೀ ಕಾಲುವೆ ಜಾಲಗಳನ್ನು ಪ್ಯಾಕೇಜ್ ಟೆಂಡರ ಆಧಾರದ ಮೇಲೆ ನೀಡಲಾಗಿದ್ದು ಕೆಲಸಗಳು ಆರಂಭಗೊಂಡಿದೆ. |
| ಇ) ರೊಳ್ಳಿ ಮತ್ತು ಮಣ್ಣಿಕೇರಿ ಏತ ನೀರಾವರಿ ಯೋಜನೆಗಳು | ಈ ಯೋಜನೆಯಡಿ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ 0.73 ಟಿಎಂಸಿ ನೀರನ್ನು ಬಳಸಿ ಬೀಳಗಿ ತಾಲೂಕಿನ 2,350 ಹೆಕ್ಟೇರ್ ಜಮೀನಿಗೆ ನೀರಾವರಿ ಕಲ್ಪಿಸಲಾಗುವುದು. ಜಾಕ್‌ವೆಲ್, ರೇಚಕಯಂತ್ರ ಮುಂತಾದ ನಿರ್ಮಾಂದ ಕೆಲಸಗಳಿಗೆ ಟರ್ನ್ ಕೀ ಆಧಾರದ ಮೇಲೆ ಪುನಃ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. |
| **3.ಭೀಮಾ ನದಿಯ ಮೇಲಿನ ಬ್ಯಾರೇಜುಗಳು** | |
| ಎ) ಘತ್ತರಗಾ ಬ್ಯಾರೇಜು | ಕೆಲಸ ಪೂರ್ಣಗೊಂಡಿದೆ. |
| ಬಿ) ಕಲ್ಲೂರ 'ಬಿ' ಬ್ಯಾರೇಜು | ಕೆಲಸ ಪೂರ್ಣಗೊಂಡಿದೆ. |

| | |
|---|---|
| ಸಿ) ಸೊಂತಿ ಬ್ಯಾರೇಜು – ಏತ ನೀರಾವರಿ ಯೋಜನೆ | ರೂ.188.00 ಕೋಟಿ ವೆಚ್ಚದಲ್ಲಿ ಸೊಂತಿ ಬ್ಯಾರೇಜಿನ ಏತ ನೀರಾವರಿ ಯೋಜನೆಯ ಮಾರ್ಪಾಡಿಗಾಗಿ ಸರ್ಕಾರವೂ ಆಡಳಿತಾತ್ಮಕ ಅನುಮೋದನೆ ನೀಡಿದೆ. ಈ ಯೋಜನೆಯಡಿ 4.00 ಟಿಎಂಸಿ ನೀರನ್ನು ಬಳಸಿ 17,000 ಹೆಕ್ಟೇರ್ ಜಮೀನಿಗೆ ನೀರಾವರಿ ಕಲ್ಪಿಸಲಾಗುವುದು ಮೂಲ ವಿನ್ಯಾಸದಂತೆ ಬ್ಯಾರೇಜಿನ ಸಿವಿಲ್ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದೆ ಮತ್ತು ಮಾರ್ಪಾಡಿನ ಸಿವಿಲ್ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದೆ. ಒಟ್ಟು 37 ನೇರ ಗೇಟ್‌ಗಳು ಪೈಕಿ, ರಚಿಸಿದ ಎಲ್ಲಾ ಗೇಟ್‌ಗಳು ಮುಕ್ತಾಯ ಹಂತದಲ್ಲಿದೆ. ಎತ್ತಿ ಹಿಡಿಯುವ ವಿತರಣಾ ಜಾಲ ಮತ್ತು ಜಾಕ್‌ವೆಲ್ ಮತ್ತು ಪಂಪ್ ಹೌಸ್ ಅಗೆಯುವ ಕೆಲಸ ಮುಕ್ತಾಯ ಹಂತದಲ್ಲಿದೆ. ಜಾಕ್‌ವೆಲ್‌ನ ಆರ್.ಸಿ.ಸಿ. ರಾಫ್ಟ್ ಅಡಿಪಾಯದ ಕಾಮಗಾರಿ ಪ್ರಗತಿಯಲ್ಲಿವೆ. ಎಮ್.ಎಸ್. ಪೈಪ್ ರೈಸಿಂಗ್ ಮೇನ್‌ನ್ನು 3.40 ಕಿ.ಮೀ. ವರೆಗೆ ಕೂಡಿಸಲಾಗಿದೆ. ಒಟ್ಟು 3,000 ಮೀ. ಉದ್ದದ ಇನ್‌ಟೇಕ್ ಕಾಲುವೆಯ ಕೆಲಸದಲ್ಲಿ 1,200 ಮೀಟರ್ ಉದ್ದದವರೆಗಿನ ಕಾಲುವೆಯ ಅಗೆಯುವ ಕೆಲಸ ಪೂರ್ಣಗೊಂಡಿದೆ. ಪಂಪಿಂಗ್ ಯಂತ್ರಗಳಿಗಾಗಿ ಸಂಘ್ ಮೋಡಲ್ ಸಲುವಾಗಿ ಅಧ್ಯಯನ ಕೈಗೊಳ್ಳಲಾಯಿತು. |
| ಡಿ) ಯಾದ್‌ಗೀರ್ ಬ್ಯಾರೇಜು | ಕೆಲಸ ಪೂರ್ಣಗೊಂಡಿದೆ.<br>. |
| ಇ) ಜೋಳದಡಗಿ – ಗುಡೂರು ಬ್ಯಾರೇಜು | ಕೆಲಸ ಪೂರ್ಣಗೊಂಡಿದೆ. |
| **4.ಕೃಷ್ಣಾ ನದಿಯ ಮೇಲಿನ ಬ್ಯಾರೇಜು** | |
| ಗೂಗಲ್ ಬ್ಯಾರೇಜು | ಈ ಸೇತುವೆಯ ಕೆಲಸವನ್ನು ಕೃಷ್ಣಾ ನದಿಯ ಅಡ್ಡಲಾಗಿ ದೇವದುರ್ಗಾ ತಾಲ್ಲೂಕಿನ ಗೂಗಲ್ ಹಳ್ಳಿಯ ಸಮೀಪ ನಿರ್ಮಿಸಲಾಗಿದೆ. ಸೇತುವೆ ಮತ್ತು ಕಟ್ಟಡದ ಸಿವಿಲ್ ಕಾಮಗಾರಿಯ ಕೆಲಸಗಳು ಪೂರ್ಣಗೊಂಡಿದೆ. 69 ನೇರ ಗೇಟುಗಳ ಕಲ್ಪಿಸುವ ಕೆಲಸಗಳ ಪೈಕಿ 54 ಗೇಟುಗಳು ರಚನಕಾರ್ಯ ಪೂರ್ಣಗೊಂಡಿದೆ. |

| | |
|---|---|
| **5. ಮಾಂಜ್ರಾ ನದಿಯ ಮೇಲಿನ ಬ್ಯಾರೇಜು**<br><br>ಎ) ಜಿರಿಗಿಹಾಳ ಬ್ಯಾರೇಜು<br>ಬಿ) ಮಣಿಕೇಶ್ವರ ಬ್ಯಾರೇಜು<br>ಸಿ) ಹಾಲ್‌ಹಳ್ಳಿ ಬ್ಯಾರೇಜು<br>ಡಿ) ಚಂದಾಪುರ ಬ್ಯಾರೇಜು | 4.80 ಟಿ.ಎಮ್.ಸಿ. ನೀರನ್ನು ಉಪಯೋಗಿಸಿಕೊಳ್ಳುವ ಸಲುವಾಗಿ ಗೋದಾವರಿ ಕಣಿವೆಯಲ್ಲಿ ಬೀದರ್ ಜಿಲ್ಲೆಯ ಮಾಂಜ್ರಾ ನದಿಯ ಮೇಲೆ ಅಡ್ಡಲಾಗಿ ಈ 4 ಬ್ಯಾರೇಜುಗಳನ್ನು ಕಟ್ಟಲಾಗುತ್ತಿದೆ ಮತ್ತು ಕೆಲಸಗಳು ಪ್ರಗತಿಯಲ್ಲಿವೆ. ತಳಹದಿಗಾಗಿ ಅಗೆಯುವ ಕೆಲಸ ಪೂರ್ಣಗೊಂಡಿದೆ. ರ್‍ಯಾಫ್ಟ್‌ಗಳನ್ನು ಸ್ಥಾಪಿಸುವ ಹಾಗೂ ಪೀರ್ ಕಾಂಕ್ರೀಟೀಕರಣಗೊಳಿಸುವ ಕೆಲಸ ಪ್ರಗತಿಯಲ್ಲಿದೆ. ಸ್ವಯಂಚಾಲಿತ ಮೇಲೆತ್ತುವ ದ್ವಾರಗಳನ್ನು ಕಲ್ಪಿಸಲು ಮಾಣಿಕೇಶ್ವರದ 8 ಬ್ಯಾರೇಜ್‌ಗಳಲ್ಲಿ 4 ವ್ಯಾರೇಜ್‌ಗಳಿಗೆ ಸ್ವಯಂಚಾಲಿತ ಮೇಲೆತ್ತುವ ದ್ವಾರಗಳನ್ನು ಸ್ಥಾಪಿಸಲಾಗಿದೆ. ಈ ಎಲ್ಲಾ ಬ್ಯಾರೇಜ್‌ಗಳ ಎಂಬೆಡ್ಡೆಡ್ ಭಾಗಗಳ ಹಾಗೂ ದ್ವಾರಗಳ ಕೀಲುಗಳ ರಚನಾಕಾರ್ಯ ಪ್ರಗತಿಯಲ್ಲಿದೆ. |

**30.09.2009 ಕ್ಕೆ ಅಂತ್ಯಗೊಂಡ ತ್ರೈಮಾಸಿಕದಲ್ಲಿ ಸ್ವೀಕರಿಸಲಾದ/ಇತ್ಯರ್ಥವಾದ/ಬಾಕಿ ಉಳಿದ ಹೂಡಿಕೆದಾರರ ಕುಂದುಕೊರತೆಗಳ ವಿವರ (ನಮ್ಮ ಎಲ್ಲಾ ನೋಂದಣಿ ಹಾಗೂ ವರ್ಗಾವಣೆ ಏಜೆಂಟರ ವರದಿಯಂತೆ ಮತ್ತು ಕಂಪನಿಯಲ್ಲಿ ಲಭ್ಯವಿರುವ ಮಾಹಿತಿ)**

| 30.06.2009 ರಲ್ಲಿದ್ದಂತೆ ಬಾಕಿ | ತ್ರೈಮಾಸಿಕದಲ್ಲಿ ಸ್ವೀಕೃತಿ | ಒಟ್ಟು | ತ್ರೈಮಾಸಿಕದಲ್ಲಿ ಇತ್ಯರ್ಥವಾದವು | ತ್ರೈಮಾಸಿಕದ ಅಂತ್ಯದಲ್ಲಿ ಇತ್ಯರ್ಥವಾಗದೇ ಉಳಿದವು |
|---|---|---|---|---|
| 4 | 754 | 758 | 746 | 12 |

ಟಿಪ್ಪಣಿ: 1) ಸಾಮಾನ್ಯವಾಗಿ ಯೋಜನಾ ಕಾರ್ಯಪ್ರಗತಿಯು ತೃಪ್ತಿಕರವಾಗಿದೆ.

2) ಕಂಪನಿಯಲ್ಲಿ ಹಾಗೂ ಕಂಪನಿಯ ನಾಲ್ಕು ನೋಂದಣಿ ಹಾಗೂ ವರ್ಗಾವಣೆ ಏಜೆಂಟರು ನೋಡಿಕೊಳ್ಳುವ ಹೂಡಿಕೆದಾರರ ಕುಂದುಕೊರತೆಗಳನ್ನು ಹಣಕಾಸು, ಸಂಭಾವನೆ ಮತ್ತು ಬಾಂಡುದಾರರ/ಹೂಡಿಕೆದಾರರ ಕುಂದುಕೊರತೆಗಳ ಸಮಿತಿಯು ಪರಿಶೀಲಿಸುತ್ತದೆ.

3) ಸರಣಿ II (DDB), VI-A, VI-B,VII-A,VIIB, VIII-B, VIII-C, IX-A, X-A, X-B, X-C, XI-B, XI-C, XI-D ಮತ್ತು XII-A ಬಾಂಡುಗಳಿಗೆ ಸಂಬಂಧಿಸಿದಂತೆ ಹೂಡಿಕೆದಾರರು ಬಾಂಡ್ ಸರ್ಟಿಪಿಕೇಟ್‌ಗಳನ್ನು ವಾಪಸಾತಿ ಹಕ್ಕು ಸಾದನೆಗೆ ಇಲ್ಲಿಯವರೆಗೆ ಸಲ್ಲಿಸದೇ ಇದ್ದಲ್ಲಿ, ಆದಷ್ಟು ಬೇಗ ಬಾಂಡ್ ಸರ್ಟಿಫೀಕೇಟ್‌ಗಳನ್ನು ಸಲ್ಲಿಸಿ ಹಣವನ್ನು ವಾಪ್ಪಸ್ಸು ಪಡೆಯಬಹುದು.

ದಿನಾಂಕ : 26.10.2009 ಬಸವರಾಜು

ಸ್ಥಳ: ಬೆಂಗಳೂರು ವ್ಯವಸ್ಥಾಪಕ ನಿರ್ದೇಶಕರು